# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/135/15-16

ದಿನಾಂಕ :07-06 2016

ಉಪಸ್ಥಿತರು: **ಶ್ರೀಮತಿ ಕೆ. ಅನ್ನಪೂರ್ಣ** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ಪಿ. ನಾಗರಾಜ ತಂದೆ ಪುವ್ವಾಡಿ ಎರ್ರಿಸ್ವಾಮಿ ಸಾ\|\| ಹವಂಭಾವಿ, ಸಿರುಗುಪ್ಪ ರಸ್ತೆ, ವಾರ್ಡ್ ನಂ 25, ಬಳ್ಳಾರಿ<br>**(ಶ್ರೀ ಮಂಜುನಾಥ, ವಕೀಲರು, ಬಳ್ಳಾರಿ)** | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನೀರಿಕ್ಷಕರು, ಬಳ್ಳಾರಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಬಳ್ಳಾರಿ | 290/9 ಪೈಕಿ | 0.05.50 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಎಂ ಆರ್ ನಂ 1184/2005-06 ದಿನಾಂಕ 27/05/2006 ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ , ದಿನಾಂಕ: 22-04-2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶೀಲಿಸಲಾಗಿ ಕಂದಾಯ ನಿರೀಕ್ಷಕರು ಬಳ್ಳಾರಿ ಇವರು ಖರೀದಿದಾರರು ಕೃಷಿಕಾರ್ಮಿಕ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲವೆಂದು ಹಕ್ಕು ಬದಲಾವಣೆಯನ್ನು ಗೈರು ಮಂಜೂರು ಮಾಡಿರುತ್ತಾರೆ. ಮುಂದುವರೆದು ಸದರಿ ಜಮೀನನ್ನು ವಾದಿಗಳು ದಿನಾಂಕ 04-04-2006 ರಂದು ನೊಂದಾಯಿತ ಕ್ರಯ ಪತ್ರ 84/06-07 ರನ್ವಯ ಬಿ.ಲಕ್ಷ್ಮೀರೆಡ್ಡಿ ತಂದೆ ರಾಮರೆಡ್ಡಿ ಇವರಿಂದ ಖರೀದಿಸಿರುತ್ತಾರೆ. ಮತ್ತು ವಾದಿಗಳು ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಋಣಭಾರ ಪ್ರಮಾಣ ಪತ್ರ ಸಲ್ಲಿಸಿದ್ದು, ಕೃಷಿಕಾರ್ಮಿಕರು ಅಥವಾ ವ್ಯವಸಾಯ ಗಾರರೆಂಬುದಕ್ಕೆ ಬಳ್ಳಾರಿ ಗ್ರಾಮದ 723ಎ2/ಬಿ/1 ವಿಸ್ತೀರ್ಣ 01.95.91 ರ ವಾದಿಹೆಸರಿನಲ್ಲಿಯ ಪಹಣಿಯನ್ನು ಸಲ್ಲಿಸಿರುತ್ತಾರೆ.ಕಾರಣ ಹಕ್ಕುಬದಲಾವಣೆ ಮಾಡುವ ಕುರಿತು ಈ ಕೆಳಕಂಡಂತೆ ಆದೇಶಿಸಲಾಗಿದೆ.

:: ಆದೇಶ ::

ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿದೆ.

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಬಳ್ಳಾರಿ ಗ್ರಾಮದ ಸ.ನಂ 290/9 ಪೈಕಿ ವಿಸ್ತೀರ್ಣ: 0.05.50 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಬಳ್ಳಾರಿ ಇವರ ಆದೇಶ 1184/05-06 ದಿನಾಂಕ 27-05-2006 ರನ್ನು ರದ್ದುಪಡಿಸಿದೆ. ಕ್ರಯ ಪತ್ರದಂತೆ ಹಕ್ಕುಬದಲಾವಣೆ ಮಾಡಲು ಆದೇಶಿಸಿ, ಪಹಣಿಕಾಲಂ 11 ರಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 95 ರ ಉಲ್ಲಂಘನೆ ಬಗ್ಗೆ ಸಂಶಯವಿದೆ ಎಂದು ನಮೂದಿಸಲು ತಹಶೀಲ್ದಾರರು ಬಳ್ಳಾರಿ ಇವರಿಗೆ ಸೂಚಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ, **ದಿನಾಂಕ:** 07 -06-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಸಹಾಯಕ ಆಯುಕ್ತರು
ಬಳ್ಳಾರಿ.

ಪ್ರತಿಯನ್ನು : ವಾದಿ ಮತ್ತು ಪ್ರತಿವಾದಿಗಳಿಗೆ , ತಹಶೀಲ್ದಾರರು ಬಳ್ಳಾರಿ ಇವರಿಗೆ ಸೂಕ್ತ ಕ್ರಮಕ್ಕಾಗಿ